

## ಜುಲೈ 28
## ವಿಶ್ವ ಪರಿಸರ ಸಂರಕ್ಷಣಾ ದಿನ

ಪರಿಸರ ಸಂರಕ್ಷಣೆಯ ದುಃಸ್ವಪ್ನಗಳಲ್ಲಿ ಪ್ಲಾಸ್ಟಿಕ್ ಪೆಡಂಭೂತವೂ ಒಂದು. ಊರುಕೇರಿ ನಗರಗಳು ಮಾತ್ರವಲ್ಲ – ಹಳ್ಳಕೊಳ್ಳ, ಕೆರೆ–ನದಿ, ಸಾಗರ, ಹಿಮಾಲಯದಲ್ಲೂ ತುಂಬಿಕೊಂಡಿದೆ ಪ್ಲಾಸ್ಟಿಕ್ ಕಸ. ಮನೆಯ ಒಳಾಂಗಣದಲ್ಲಿ ಪ್ಲಾಸ್ಟಿಕ್, ಹೆಜ್ಜೆ ಹೊರಗಿಟ್ಟರೆ ರಸ್ತೆಯಲ್ಲೂ ಪ್ಲಾಸ್ಟಿಕ್! ಪರಿಸರ ಹಾಗೂ ಜೀವಿಗಳ ಪಾಲಿಗೆ ವಿಷವಾಗಿ ಪರಿಣಮಿಸಿರುವ ಈ ಪ್ಲಾಸ್ಟಿಕ್‌ನಿಂದ ದೂರ ಇರುವುದು ಹೇಗೆ? ಅದು ಸಾಧ್ಯವೇ? ಪ್ಲಾಸ್ಟಿಕ್ ವಿಶ್ವರೂಪದ ಬಗ್ಗೆ ತಿಳಿಯುತ್ತಲೇ ಅದರ ಉತ್ಪಾದನೆ ಹಾಗೂ ಬಳಕೆಯ ಬಗ್ಗೆ ಯೋಚಿಸುವುದು ವೈಯಕ್ತಿಕ ಹಿತಾಸಕ್ತಿ ಹಾಗೂ ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಮುಖ್ಯವಾದುದು.

■ ಗುರುರಾಜ್ ದಾವಣಗೆರೆ